ಓ.ಎಸ್. ನಂ. 93/2018
ಪಿ.ಡಬ್ಲ್ಯೂ- 1

(ಇಂದು ದಿಃ 27-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು **:-** ಶ್ರೀ**VJM** ವಕೀಲರಿಂದ **:-**

ನನಗೆ 7 ರಿಂದ 10 ಪ್ರತಿವಾದಿಯರು ಪರಿಚಯ ಇದ್ದಾರೆ. ಅವರು ಬೆನಕನಹಳ್ಳಿ ಗ್ರಾಮದರು. 1 ನೇ ಪ್ರತಿವಾದಿ ಬಸಲಿಂಗಮ್ಮ ನನ್ನ ತಾಯಿ ತಂಗಿ. ಮೃತ ಬಸಲಿಂಗಮ್ಮ ನನ್ನ ತಾಯಿ ತಂಗಿ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. 1 ನೇ ವಾದಿಗೆ ಮತ್ತು ಬಸಲಿಂಗಮ್ಮರವರಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮಾಹದೇವಮ್ಮ ಮೃತ ಬಸಲಿಂಗಮ್ಮನ ಸಂಬಂಧಿ ಎಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ಬಸಲಿಂಗಮ್ಮ ಹುಟ್ಟಿನಿಂದ ಸಾಯುವರೆಗೆ ಬೆನಕನಹಳ್ಳಿಲ್ಲಿ ಇದ್ದರು ಎಂದರೆ ಸರಿಯಲ್ಲ. ಬಸಲಿಂಗಮ್ಮ ತನ್ನ ಕಟುಂಬ ಅವಶ್ಯಕತೆಗಾಗಿ ರಾಜಪ್ಪರವರಿಗೆ ಮತ್ತು 8 ರಿಂದ 10 ನೇ ಪ್ರತಿವಾದಿಯರಿಗೆ ಜಮೀನುಗಳನ್ನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ಮೊದಲು ಯಾವ ಜಮೀನು ಮಾರಾಟ ಮಾಡಿದಳು ನನಗೆ ಗೊತ್ತಿಲ್ಲ. ಶಶಿಕಲಾರವರಿಗೆ ದಾವಾ ಐಟೆಮ್ ನಂಬರ 1 ರಿಂದ 9 ನೊಂದಾಯಿತ ದಾನ ಪತ್ರದ ಮೂಲಕ ಬಂದಿದ್ದವು ಎಂದರೆ ಸರಿಯಲ್ಲ. ಬಸಲಿಂಗಮ್ಮ ಮಾರಾಟ ಮಾಡಿರುವ ದಾವಾ ಜಮೀನುಗಳಲ್ಲಿ ವಾದಿಯರಿಗೆ ಮತ್ತು ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಬಸಲಿಂಗಮ್ಮ ಮತ್ತು ಅವರ ಗಂಡ ಬೆನಕನಹಳ್ಳಿಯಲ್ಲಿ ವಾಸ ಇದ್ದರು ಎಂದರೆ ಬಸಲಿಂಗಮ್ಮ ರವರ ತಂದೆ ತೀರಿ ಹೋದ ನಂತರ ಬೆನಕನಹಳ್ಳಿಯಲ್ಲಿ ವಾಸವಿದ್ದರು ಎಂದು ಹೇಳುತ್ತಾರೆ. ಅದಕ್ಕಿಂತ ಮುಂಚೆ ಕೋಡ್ಲಾ ದಲಿ ಇರುತ್ತಿದ್ದರು. ಮುಂಚೆ ಕೋಡ್ಲಾ ದಂಲ್ಲಿ ಇರುತ್ತಿದ್ದರು ನಂತರ ಅವರ ತಾಯಿ ತೀರಿ ಹೋದ ನಂತರ ಬೆನಕನಹಳ್ಳಿಗೆ ಬಂದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂಚೆ ಕೋಡ್ಲಾದಲ್ಲಿ ವಾಸ ಇದ್ದರು ಎಂದು ತೋರಿಸಲು ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ.

ಖರೀದಾರರಿಗೆ ತೊಂದರೆ ಕೊಡುವ ಸಲುವಾಗಿ ಈ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ

ಸರಿಯಲ್ಲ. ಬೆನಕನಹಳ್ಳಿ ಭಾಗದಲ್ಲಿ ಇತ್ತಿಚಿಗೆ ಶ್ರೀ ಸಿಮೇಂಟ್ ಕಂಪನಿ ಆರಂಭ ಆಗಿದೆ ಎಂದರೆ ಸರಿ. ಸದರಿ ಕಂಪನಿ ಜಮೀನುಗಳನ್ನು ಕೊಂಡುಕೊಳ್ಳುತ್ತಿರುವ ಕಾರಣ ಜಮೀನಿನ ಬೆಲೆ ಹೆಚ್ಚಾಗಿದೆ ಎಂದರೆ ಸರಿಯಲ್ಲ. ಕಾರಣ ಹೇಗಾದರು ಭಾಗ ಪಡೆದುಕೊಂಡು ಲಾಭ ಮಾಡಿಕೊಳ್ಳುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.